ಎಂತೆಂತಹ ಒಡವೆಗಳಿದ್ವು... ಒಂದು ಕ್ಷಣ ಗಾಬರಿಯಾಯ್ತು. ಆದರೂ ಅದನ್ನು ತೆಗೆದು ಬ್ಯಾಗಿಗೆ ಹಾಕ್ಕೊಂಡು ಬಂದುಬಿಟ್ಟೆ. ನೋಡಿ ನೀವೂವೆ' ಅಂತ ಜಿಪ್ ಎಳೆದು ಎಲ್ಲವನ್ನೂ ಒಂದೊಂದಾಗಿ ಎತ್ತಿಡತೊಡಗಿದಳು. ನಾನಂಥದ್ದನ್ನು ಎಂದೂ ನೋಡಿರಲೇ ಇಲ್ಲ. ಅವಳೇ ತೋರಿಸುತ್ತಾ, 'ಇದು ರೂಬಿ ಮಾವಿನಕಾಯಿ ಮಾಲೆ... ಇದು ಸಿಂಹಲಲಾಟ ಕಡಗ, ಇದು ವಜ್ರದ ನೆಕ್ಲೇಸು, ಇದು ಬೊಂಬಾಯಿ ಬಳೆಗಳು' ಅನ್ನುತ್ತಾ, ಒಡವೆಗಳನ್ನು ಎತ್ತಿಹಿಡಿಯುತ್ತ, ಅದರ ಹೊಳಪಲ್ಲಿ ಮುಖದ ಮಿಂಚೇರಿದ್ದು ಗೊತ್ತಾಗದಂತೆ ತನ್ಮಯವಾಗಿದ್ದಳು. ಆ ಒಡವೆಗಳ ಹೊಳಪಿಗಿಂತಲೂ ಅವಳ ಕಣ್ಣುಗಳ ಮಿಂಚೇ ಹೆಚ್ಚಿತ್ತು ಎಂದು ನನಗನ್ನಿಸಿತು. ನನಗೂ ತುಸು ಗಾಬರಿಯಾಯ್ತು. 'ಅಲ್ಲ ರಮ್ಯ ಇದೇನು ಸ್ವಲ್ಪ ದುಡ್ಡಾಗುತ್ತ? ಯಾರೋ ಏನೋ ಪಾಪ... ಅವರನ್ನು ಹುಡುಕಿ ಕೊಟ್ಟು ಬರೋಣವ?' ಅಂದೆ. 'ನಿಮಗೆಲ್ಲೋ ಭ್ರಾಂತು, ಅವರನ್ನು ಹುಡುಕೋದು ಅಂದರೆ? ಇಷ್ಟಕ್ಕೂ ಯಾರಂತ ಗೊತ್ತಿದ್ರೆ ತಾನೇ ಹುಡುಕೋಕ್ಕಾಗದು. ಲಕ್ಷ್ಮಿ ಅನುಗ್ರಹ ಮಾಡಿ ಕೊಟ್ಟಿದ್ದಾಳೆ. ನಾನಂತು ಇದನ್ನು ಯಾರಿಗೂ ಕೊಡಲ್ಲ' ಅಂದಳು. 'ಹಂಗೆಲ್ಲ ಬೇರೆಯವ್ರ ಒಡವೆ ಇಟ್ಟುಕೊಳ್ಳಬಾರದು ರಮ್ಯ. ವೆರಿ ಮೀನ್ ಆಫ್ ಯೂ... ಆ ಬ್ಯಾಗಲ್ಲಿ ಏನಾದರು ಚೀಟಿ, ಹೆಸರು, ನಂಬರು ಇದ್ಯಾ ನೋಡು' ಅಂದೆ. ಇಷ್ಟೂ ಬೇಸರಿಸಿಕೊಳ್ಳದೆ, 'ಏನೂ ಇಲ್ಲ. ಹಾಗೊಂದ್ವೇಳೆ ಇದ್ದಿದ್ರೆ ನಾನು ಕೊಡದೆ ಇರ್ತಿದ್ನ' ಅಂದಳು. ನಂಗೆ ಇನ್ನೊಂದು ವಿಚಾರ ಹೊಳೆದು, 'ರಮ್ಯ ಇದು ಚಿನ್ನದ್ದೇ ಅಂತ ಏನು ಗ್ಯಾರಂಟಿ? ಈಗೆಲ್ಲ ಬರುತ್ತಲ್ಲ ಒಂದು ಗ್ರಾಂ ಗೋಲ್ಡು, ಎರಡು ಗ್ರಾಂ ಗೋಲ್ಡು, ಅದೂ ಇದೂ ಅಂತ... ಅದಾಗಿದ್ರೆ?' ಅಂದೆ. ಆಗ ಮಾತ್ರ ಅವಳು ಖಚಿತವಾಗಿ, 'ಇದು ಖಂಡಿತ ಚಿನ್ನದ್ದೇ... ಇದು ಅನ್‌ಕಟ್‌ರೂಬಿ, ಈ ಓಲೆ ಬ್ಲೂ ಜಾಗ್ವಾರ್ದು... ಈ ಕಡಗ ಶುದ್ಧ ಅಪರಂಜೀದು... ಏನಿಲ್ಲ ಅಂದ್ರು ಅರವತ್ತು ಗ್ರಾಮಿದೆ' ಅಂದಳು.

